## ***ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ***

**ಉಪಸ್ಥಿತರು : ಶುಷ್ಮ ಟಿ.ಸಿ.**

ಬಿ.ಕಾಂ., ಎಲ್.ಎಲ್.ಬಿ.,

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

## ಸಿ.ಸಿ. ನಂ.**493/2013**

ಫಿರ್ಯಾದಿ : ಸರಕಾರದ ಪರವಾಗಿ ಬನಹಟ್ಟಿ ಪೋಲಿಸ ಠಾಣೆ

ವಿರುದ್ಧ

ಆರೋಪಿಗಳುಃ ಅರುಣ ಭೀಮರಾವ ಕದಮ್ ಹಾಗೂ ಇತರರು.

**-:ದೋಷಾರೋಪಣೆ :-**

*ಶುಷ್ಮ ಟಿ.ಸಿ,, ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು, ಆರೋಪಿತರಾದ :*

ಆರೋಪಿ ನಂ.1) ಅರುಣ ಭೀಮರಾವ ಕದಮ್,
ಆರೋಪಿ ನಂ.2) ಯಲ್ಲಪ್ಪ ತಂದೆ ಗಣಪತಿ ಜೊಗದಂಡೆ,
ಆರೋಪಿ ನಂ.3) ಶಟವಾಜಿ ತಂದೆ ತಿಪ್ಪಣ್ಣ ಕದಮ್,
ಎಲ್ಲರೂ ಸಾಃ ನಾವಲಗಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಫಿರ್ಯಾದಿ ಚಾಸಾ-4 ರವರ ಗಂಡನಿದ್ದು, ಆಕೆಯ ತಂದೆ ನಾವಲಗಿ ಗ್ರಾಮದ ಭೀಮರಾವ ಯಲ್ಲಪ್ಪ ಕದಂ ಇವರಿಗೆ ಲಕ್ವಾ ಹೊಡೆದಾಗ ಆತನನ್ನು ಫಿರ್ಯಾದಿ ಮತ್ತು ಆತನ ಹೆಂಡತಿ-ಚಾಸಾ-4 ಇವರು ಉಪಚಾರ ಮಾಡಿಸಿದ್ದು, ಆ ಕಾಲಕ್ಕೆ ಆತನ ಬಾಬತ್ತಿನ ಮುಂಬೈಯಲ್ಲಿದ್ದ ಮನೆ ಮಾರಾಟ ಮಾಡಿ ತನಗೆಂದು 50 ಸಾವಿರ ಹಣ ಇಟ್ಟುಕೊಂಡು ಉಳಿದ ಹಣವನ್ನು ತನ್ನ ಮಕ್ಕಳಿಗೆ ಹಂಚಿದ್ದು, ನಂತರ ಆತ ಗುಣವಾಗದ ಕಾರಣ ನಾವಲಗಿ ಗ್ರಾಮಕ್ಕೆ ಆತನ ಮನೆಗೆ ಕರೆದುಕೊಂಡು ಬಂದಿದ್ದು, ನಂತರ ಆತ ಮೃತಪಟ್ಟಿದ್ದು, ಮೃತನ ಹತ್ತಿರ ಇದ್ದ 50 ಸಾವಿರ ಹಣದ ಬಗ್ಗೆ ಆತನ ಮಕ್ಕಳು ವಿಚಾರಿಸಿದಾಗ ಆತನ ಉಪಚಾರಕ್ಕಾಗಿ ಹಣ ಖರ್ಚಾದ ಬಗ್ಗೆ ತಿಳಿಸಿದ್ದಕ್ಕಾಗಿ ಮತ್ತು ಸುಮಾರು 3-4 ವರ್ಷಗಳ ಹಿಂದೆ 1 ನೇ ಆರೋಪಿಯ ತಂಗಿಯ ಲಗ್ನದ ಕಾಲಕ್ಕೆ ಮಾಡಿಸಿದ್ದ ವಿಡಿಯೋ ಕ್ಯಾಸೆಟನ ಸಿ.ಡಿ.ಗಳನ್ನು ಕೊಟ್ಟಿಲ್ಲ ಅಂತಾ 1 ನೇ ಆರೋಪಿತನು ಫಿರ್ಯಾದಿ ಮತ್ತು ಚಾಸಾ-4 ರವರ ಮೇಲೆ ಸಿಟ್ಟಾಗಿದ್ದು, ದಿನಾಂಕ 22-03-2013 ರಂದು ಬೆ.09-30 ಗಂಟೆ ಸುಮಾರಿಗೆ ಬನಹಟ್ಟಿ ಪೋಲಿಸ ಠಾಣಾ ವ್ಯಾಪ್ತಿಯ ನಾವಲಗಿ ಗ್ರಾಮದಲ್ಲಿ 1 ರಿಂದ 4 ನೇ ಆರೋಪಿತರು ಮೇಲೆ ಹೇಳಿದ ಕಾರಣಕ್ಕಾಗಿ ಒಂದುಗೂಡಿ ಸಂಗನಮತರಾಗಿ ಫಿರ್ಯಾದಿಯೊಂದಿಗೆ ಜಗಳ ತೆಗೆಯುವ ಉದ್ದೇಶದಿಂದ ಆತನು ವಾಸ ಮಾಡುವ ಮನೆಯ ಮುಂದೆ ಫಿರ್ಯಾದಿ ಮತ್ತು ಆತನ ಹೆಂಡತಿಯಾದ ಚಾಸಾ-4 ಇವರ ಜೊತೆ ಜಗಳ ತೆಗೆದು, ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಶಾಂತಿ ಕದಡುವ ಪ್ರಯತ್ನ ಮಾಡಿದ್ದು, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ.34 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಒಂದುಗೂಡಿ ಸಂಗನಮತರಾಗಿ ಫಿರ್ಯಾದಿ ಮತ್ತು ಆತನ ಹೆಂಡತಿ ಚಾಸಾ-4 ರವರೊಂದಿಗೆ ಜಗಳ ತೆಗೆದು, ಒಡಗಟ್ಟಿಗೆಯಿಂದ ಫಿರ್ಯಾದಿಯ ತಲೆಗೆ ಹೊಡೆದು ಸಾದಾ ಗಾಯಪಡಿಸಿದ್ದು ಅಲ್ಲದೇ ಆತನನ್ನು ಬಿಡಿಸಲು ಬಂದ ಆತನ ಹೆಂಡತಿ ಚಾಸಾ-4 ರವರಿಗೆ 2 ನೇ ಆರೋಪಿ ಬಡಿಗೆಯಿಂದ ತಲೆಗೆ ಹೊಡೆದು ಸಾದಾ ಗಾಯಪಡಿಸಿದ್ದು, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೂರನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಒಂದುಗೂಡಿ ಸಂಗನಮತರಾಗಿ ಫಿರ್ಯಾದಿಯೊಂದಿಗೆ ಜಗಳ ತೆಗೆಯುವ ಉದ್ದೇಶದಿಂದ ಮತ್ತು ಆತನ ಹೆಂಡತಿ ಚಾಸಾ-4 ಈಕೆಗೆ ಅವಮಾನಪಡಿಸುವ ಉದ್ದೇಶದಿಂದ ಆಕೆಯ ಕೈಹಿಡಿದು ಜಗ್ಗಾಡಿ ಅವಮಾನಪಡಿಸಿದ್ದು, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ.354 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಒಂದುಗೂಡಿ ಸಂಗನಮತರಾಗಿ ಫಿರ್ಯಾದಿಯೊಂದಿಗೆ ಜಗಳ ತೆಗೆಯುವ ಉದ್ದೇಶದಿಂದ ಫಿರ್ಯಾದಿಗೆ ಮತ್ತು ಆತನ ಹೆಂಡತಿ ಚಾಸಾ-4 ರವರಿಗೆ ಊರು ಬಿಟ್ಟು ಹೋಗಿ, ಇಲ್ಲವಾದರೆ ನಿಮ್ಮನ್ನು ಖಲಾಸ್ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಸ್ಥಳಃ ಬನಹಟ್ಟಿ                                                                                    ಸಹಿ/-
ದಿನಾಂಕಃ 09-11-2022                                              ಪ್ರ. ದ. ನ್ಯಾ.. ದಂಡಾಧಿಕಾರಿಗಳು, ಬನಹಟ್ಟಿ.